ದಿನಾಂಕಃ 01.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ**

ನಾನು 6ನೇ ತರಗತಿವರೆಗೆ ಓದಿರುತ್ತೇನೆ. ನನ್ನ ಜನ್ಮ ದಿ:01.06.1977 ಇರುತ್ತದೆ. ನಾನು ಒಕ್ಕಲುತನ ಮಾಡಿಕೊಂಡು ಖಾಯಂ ತರೀಖವಾಗಿ ಕಲ್ಲೋಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ಆಧಾರ್ ಕಾರ್ಡ್, ಪಡಿತರ ಚೀಟಿ ಎಲ್ಲಾ ಸದರಿ ದಾಖಲೆಗಳು ಕಲ್ಲೋಳ್ಳಿ ಗ್ರಾಮದ ವಿಳಾಸದಲ್ಲಿ ಇರುತ್ತವೆ.

ಸದರಿ ದಾವೆಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೂ ಸಹ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ದಾವೆಯನ್ನು ನಾನು ಪ್ರತಿವಾದಿಯರ ವಿರುದ್ದ ದಾವಾ ಜಮೀನನ್ನು ನನ್ನ ಪರವಾಗಿ ಖರೀದಿ ಪತ್ರ ಬರೆದುಕೊಡಲು ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಸರ್ವೇ ನಂ.36 ಇರುತ್ತದೆ. ಸದರಿ ಜಮೀನು ಒಟ್ಟು 1 ಎಕರೆ 39 ಗುಂಟೆ ಇದ್ದು, ಆ ಪೈಕಿ 39 ಗುಂಟೆ ಜಮೀನಿಗೆ ದಾವೆ ಹಾಕಿರುತ್ತೇನೆ.

ದಾವೆ ಹಾಕುವ ಪೂರ್ವದಲ್ಲಿ ನಾನು ಸದರಿ ಜಮೀನಿನ ಉತಾರೆಯನ್ನು ನೋಡಿರುತ್ತೇನೆ. ಸದರಿ ಉತಾರೆಯಲ್ಲಿ ಪ್ರತಿವಾದಿಯರು ಹಾಗೂ ಅವರ ಚಿಕ್ಕಪ್ಪಂದಿರ ಹೆಸರುಗಳು ಇರುತ್ತವೆ. ಸದರಿ ಚಿಕ್ಕಪ್ಪಂದಿರ ಹೆಸರುಗಳು ನನಗೆ ಗೊತ್ತಿಲ್ಲ. ಸದರಿ ಉತಾರೆಯಲ್ಲಿ ಚಿಕ್ಕಪ್ಪಂದಿರ ಹೆಸರುಗಳು ಸಹ ಜಂಟಿಯಾಗಿರುತ್ತವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಪ್ರತಿವಾದಿಯರ ಪಾಲಿನ ಜಮೀನನ್ನು ಮಾತ್ರ ಖರೀದಿಸಲು ಒಪ್ಪಿಕೊಂಡಿದ್ದು, ಆ ಪ್ರಕಾರ ಅವರು ನನಗೆ ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಜಮೀನದಲ್ಲಿ ಪ್ರತಿವಾದಿಯರಿಗೆ 39 ಗುಂಟೆ ಹಿಸ್ಸೆ ಇದ್ದು, ಉಳಿದ 1 ಎಕರೆ ಜಮೀನು ಅವರ ಚಿಕ್ಕಪ್ಪಂದಿರ ಹಿಸ್ಸೆಗೆ ಇರುತ್ತದೆ. ನಿಪಿ.1 ರಲ್ಲಿ ಪ್ರತಿವಾದಿಯರಿಗೆ ಸದರಿ ಜಮೀನದಲ್ಲಿ 4/5 ಅಂಶ ಹಿಸ್ಸೆ ಇರುವ ಬಗ್ಗೆ ಬರೆದಿರುತ್ತೀರಿ? ಎಂದರೆ ಸಾಕ್ಷಿಯು 39 ಗುಂಟೆ ಇರುವುದಾಗಿ ಬರೆಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ 4/5 ಅಂಶ ಹಿಸ್ಸೆ ಎಂದರೆ 36 ಗುಂಟೆ ಬರುತ್ತದೆ ಎಂದರೆ ನಾನು ಉತಾರೆಯಲ್ಲಿ ಎಷ್ಟು ಕ್ಷೇತ್ರ ಇತ್ತು ಅದನ್ನು ನೋಡಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ.

ನಿಪಿ.2 ಉತಾರೆಯಲ್ಲಿ 39 ಗುಂಟೆ ಇರುವುದಿಲ್ಲ ಎಂದರೆ ನಿಜ. 39 ಗುಂಟೆ ಜಮೀನಿನ ಚಕ್ಕಬಂದಿ ಹೇಳಬಲ್ಲಿರಾ? ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ದಾವಾ ಆಸ್ತಿಯನ್ನು ಮಾರಾಟ ಮಾಡುವ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರಲಿಲ್ಲ, ಆದರೆ ಊರಲ್ಲಿ ಆ ಬಗ್ಗೆ ಸುದ್ದಿ ಮಾಡಿದ್ದರು. ಸದರಿ ವಿಷಯವನ್ನು ನನಗೆ 2ನೇ ಪ್ರತಿವಾದಿಯ ಗಂಡ ಮಲ್ಲೇಶಿ ಅರಭಾಂವಿ ತಿಳಿಸಿರುತ್ತಾನೆ. ಸದರಿ ವಿಷಯವನ್ನು ನಾನು ತಿಳಿದುಕೊಂಡ ನಂತರ ದಾವಾ ಜಮೀನನ್ನು ನಾನು ಖರೀದಿ ಮಾಡುತ್ತಿರುವ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವುದಿಲ್ಲ.

ದಾವಾ ಜಮೀನು ನೀರಾವರಿ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ದಾಖಲೆಗಳಲ್ಲಿ ಭಾಗಾಯತ ಜಮೀನ ಇರುತ್ತದೆ, ಆದರೆ ಸದರಿ ಜಮೀನು ಜವಗು ಜಮೀನು ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಿಪಿ.1 ರಲ್ಲಿ ಬರೆಸಿರುವುದಿಲ್ಲ ಎಂದರೆ ನಿಜ. ದಾವಾ ಜಮೀನಿನ ಪಕ್ಕಕ್ಕೆ ಕಡಾಡಿಯವರ ಪೆಟ್ರೋಲ್ ಪಂಪ್ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಮಾರಾಟ ಮಾತುಕತೆ ಸಂಗನಕೇರಿಯ ಮಲ್ಲಪ್ಪ ಅರಭಾಂವಿ ಅವರ ಮನೆಯ ಹತ್ತಿರ ಆಗಿರುತ್ತದೆ. ಮಾತುಕತೆಯಾದ 2 ದಿನಗಳ ನಂತರ ನಿಪಿ.1 ನ್ನು ಬರೆದಿರುತ್ತಾರೆ. ಮಾತುಕತೆ ಸಂಧರ್ಭದಲ್ಲಿ ರಮೇಶ ಗೋಸಬಾಳ, ಬಾಳಪ್ಪ ದಾಸನವರ, ಮಲ್ಲಪ್ಪ ಅರಭಾಂವಿ ಅಂದರೆ 2ನೇ ಪ್ರತಿವಾದಿಯ ಗಂಡ, ಪ್ರತಿವಾದಿಯರು ಹಾಗೂ ನಾನು ಇದ್ದೇವು. ಆಗ ಸಮಯ ಬೆಳಿಗ್ಗೆ 11.00 ಗಂಟೆಯಾಗಿತ್ತು. ಆ ದಿನ ದಿ:25.07.2021 ಇತ್ತು. ಸುಮಾರು 12.30 ರ ವರಗೆ ಮಾತುಕತೆಯಾಗಿರುತ್ತದೆ. ದಾವಾ ಆಸ್ತಿಯನ್ನು ರೂ.5,50,000/- ಗಳಿಗೆ ಮಾರಾಟ ಮಾಡಲು ಪ್ರತಿವಾದಿಯರು ಒಪ್ಪಿದ್ದು, ಆ ಪೈಕಿ ಮುಂಗಡವಾಗಿ ರೂ.5 ಲಕ್ಷ ಕೊಡಲು ನಾನು ಒಪ್ಪಿಕೊಂಡಿದ್ದು, ಉಳಿದ ರೂ.50,000/- ಹಣವನ್ನು ಖರೀದಿ ಕಾಲಕ್ಕೆ ಕೊಡುವ ಬಗ್ಗೆ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆಯಾದ ದಿನ ರೂ.50,000/- ಸಂಚಕಾರಿಕೆ ಕೊಟ್ಟಿರುತ್ತೇನೆ. ಸದರಿ ವಿಷಯವನ್ನು ದಾವೆ ಹಾಕುವ ಕಾಲಕ್ಕೆ ವಕೀಲರಿಗೆ ಹೇಳಿರುತ್ತೀರಾ? ಎಂದರೆ ಸಾಕ್ಷಿಯು ನಾನು ರೂ.5 ಲಕ್ಷ ಹಣಕ್ಕೆ ಚೆಕ್ ಕೊಟ್ಟಿದ್ದು, ಸದರಿ ನಾನು ಕೊಟ್ಟ ರೂ.50,000/- ಹಣವನ್ನು ಪ್ರತಿವಾದಿಯರು ಮರಳಿ ಕೊಡುವುದಾಗಿ ತಿಳಿಸಿದ್ದರು. ಸದರಿ ರೂ.50,000/- ಹಣವನ್ನು ಮುಂಗಡವಾಗಿ ಕೊಟ್ಟ ಬಗ್ಗೆ ನಿಪಿ.1 ರಲ್ಲಿ ಬರೆಸಿರುವುದಿಲ್ಲ, ಏಕೆಂದರೆ ಪ್ರತಿವಾದಿಯರು ಸದರಿ ಹಣವನ್ನು ಮರಳಿ ಕೊಡುತ್ತೇನೆ ಎಂದು ಹೇಳಿದ್ದರು.

ದಾವೆ ಹಾಕುವ ಪೂರ್ವದಲ್ಲಿ ವಕೀಲರ ಮುಖಾಂತರ ನೋಟಿಸು ಕೊಟ್ಟಿರುತ್ತೇನೆ. ಸದರಿ ನೋಟಿಸಿನಲ್ಲಾಗಲಿ, ವಾದ ಪತ್ರದಲ್ಲಾಗಲಿ ಹಾಗೂ ಮುಖ್ಯ ವಿಚಾರಣೆಯಲ್ಲಾಗಲಿ ಸದರಿ ರೂ.50,000/- ಮುಂಗಡವಾಗಿ ಕೊಟ್ಟ ಬಗ್ಗೆ ಹೇಳಿ ಬರೆಸಿರುವುದಿಲ್ಲ. ಸದರಿ ವಿಷಯವನ್ನು ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ

ಸಾಕ್ಷಿಯು ಸದರಿ ಹಣವನ್ನು ಪ್ರತಿವಾದಿಯರು ಕೊಡುತ್ತೇನೆ ಎಂದು ಹೇಳಿದ್ದರಿಂದ ನಾನು ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ.1 ನ್ನು ಬರೆಸುವ ಕಾಲಕ್ಕೆ ರಮೇಶ ಗೋಸಬಾಳ, ಬಾಳಪ್ಪ ದಾಸನವರ, ಮಲ್ಲಪ್ಪ ಅರಭಾಂವಿ ಅಂದರೆ 2ನೇ ಪ್ರತಿವಾದಿಯ ಗಂಡ, ಪ್ರತಿವಾದಿಯರು ಹಾಗೂ ನಾನು ಗೋಕಾಕಕ್ಕೆ ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಪಿ.ಬಿ.ಹಿರೇಮಠ ರವರ ಕಛೇರಿಗೆ ಬಂದಿದ್ದೇವು. ಸದರಿ ನಿಪಿ.1 ಬರೆಯಲು ಪ್ರತಿವಾದಿಯರೇ ಮಾಹಿತಿ ಕೊಟ್ಟಿರುತ್ತಾರೆ. ಆ ಕಾಲಕ್ಕೆ ಪ್ರತಿವಾದಿಯರು ಜಮೀನಿನ ಉತಾರೆ, ಆಧಾರ ಕಾರ್ಡ ದಾಖಲೆಗಳನ್ನು ತಂದಿದ್ದರು.

ನಿಪಿ.1 ನ್ನು ಬೆರಳಚ್ಚು ಮಾಡಿಸಿರುತ್ತಾರೆ. ಅದನ್ನು ಎಷ್ಟು ಮುಖಬೆಲೆಯ ಸ್ಟ್ಯಾಂಪ್ ಮೇಲೆ ಬರೆದಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನಿಪಿ.1 ನ್ನು ಬಾಂಡ್ ರೈಟರ್ ಬೆರಳಚ್ಚು ಮಾಡಿರುತ್ತಾರೆ. ಪಿ.ಬಿ.ಹಿರೇಮಠ ರವರ ಕಛೇರಿಯಲ್ಲಿ ಸದರಿ ದಿನ ಸಂಜೆ 4.00 ಗಂಟೆಯವರೆಗೆ ಇದ್ದೇವು. ನೊಂದಣಿ ಕಛೇರಿಗೆ ಹೋದಾಗ ಮಧ್ಯಾಹ್ನ 1.00 ಗಂಟೆಯಾಗಿತ್ತು. ನಿಪಿ.1 ನ್ನು ನೊಂದಣಿಗಾಗಿ ಬಾಂಡ್ ರೈಟರ್ ಹಾಜರ ಮಾಡಿರುತ್ತಾರೆ. ನೊಂದಣಿಗೆ ಹಾಜರ ಮಾಡಿದಾಗ ಮಧ್ಯಾಹ್ನ 1.00 ಗಂಟೆಯಾಗಿತ್ತು. ಸದರಿ ಮೇಲೆ ಹೇಳಿದ ರೂ.5 ಲಕ್ಷ ಹಣ ಎಲ್ಲಿಂದ ತಂದಿದ್ದೀರಿ ಎಂದರೆ ಸಾಕ್ಷಿಯು ಕಬ್ಬು ಕಳುಸಿದ ಬಿಲ್ಲು ಬಂದಿತ್ತು ಎಂದು ನುಡಿಯುತ್ತಾರೆ. ಸದರಿ ಬಿಲ್ಲು ಸನ್ 2021 ನೇ ಸಾಲಿಗೆ ಸಂಬಂಧಿಸಿತ್ತು. ಸದರಿ ಕಬ್ಬನ್ನು ನಾನು ಕಲ್ಲೋಳ್ಳಿ ಗ್ರಾಮದ ಹದ್ದಿಯಲ್ಲಿರುವ ನನ್ನ ಜಮೀನ ರಿ.ಸ.ನಂ.36, 37 ಮತ್ತು 28 ನೇದ್ದವುಗಳಲ್ಲಿ ಬೆಳೆದಿದ್ದೆ. ಸದರಿ ಕಬ್ಬನ್ನು ನಾನು ಹುಣಶ್ಯಾಳ ಪ್ಯಾಕ್ಟರಿಗೆ ಕಳಿಸಿದ್ದೆ.

ಫ್ಯಾಕ್ಟರಿಯವರು ಕಬ್ಬಿನ ಮೊತ್ತವನ್ನು ನನ್ನ ಐ.ಡಿ.ಬಿ.ಐ ಬ್ಯಾಂಕ ಘಟಪ್ರಭಾ ಶಾಖೆಯಲ್ಲಿರುವ ಖಾತೆಗೆ ಜಮೆ ಮಾಡಿರುತ್ತಾರೆ. ಸದರಿ ನನ್ನ ಖಾತೆಯ ಪಾಸಬುಕ್ಕನ್ನು ಹಾಜರಪಡಿಸಿಲ್ಲ. ಪಾಸಬುಕ್ಕನ್ನು ಹಾಜರಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ನಿಜ. ನಾನು ರೂ.5 ಲಕ್ಷ ಮೊತ್ತದ ಚೆಕ್ಕನ್ನು 2ನೇ ಪ್ರತಿವಾದಿಯ ಹೆಸರಿಗೆ ಕೊಟ್ಟಿರುತ್ತೇನೆ. ಪ್ರತಿವಾದಿ ನಂ.1, 3 ಮತ್ತು 4 ರವರ ಹೆಸರಿಗೆ ಚೆಕ್ಕನ್ನು ಬರೆದಿರುವುದಿಲ್ಲ. ಸದರಿ ಚೆಕ್ಕನ್ನು ನಾನು ನೊಂದಣಿ ಕಛೇರಿಯ ಹತ್ತಿರ ಬಾಂಡ್ ಬರೆಯುವವರ ಹತ್ತಿರ ಹೊರಗಡೆ ಕೊಟ್ಟಿರುತ್ತೇನೆ.

ನಿಪಿ.1 ರ ಪುಟ ಸಂಖ್ಯೆ 3 ರಲ್ಲಿ ಬರೆದುಕೊಟ್ಟಿದ್ದಾಗಿ (ಮತ್ತು ಪೂರ್ಣ/ಭಾಗಶ; ಪ್ರತಿಫಲ ರೂ...................... (ರೂಪಾಯಿ............... ಮುಟ್ಟಿದ್ದಾಗಿ) ಒಪ್ಪಿರುತ್ತಾರೆ ಎಂಬುವದನ್ನು ಖಾಲಿ ಬಿಡಲಾಗಿದೆ ಎಂದರೆ ನಿಜ. ದಿ:26.07.2021 ರಿಂದ ದಾವೆ ಹಾಕುವವರೆಗೆ ಪ್ರತಿವಾದಿಯರೊಂದಿಗೆ ಪತ್ರ ವ್ಯವಹಾರ ಮಾಡಿರುತ್ತೀರಾ? ಎಂದರೆ ಸಾಕ್ಷಿಯು ವಕೀಲರ ಮುಖಾಂತರ ನೋಟಿಸನ್ನು ಮಾತ್ರ ಕಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಪತ್ರ ವ್ಯವಹಾರ ಮಾಡಲು ನನಗೆ ಅಡಚಣಿ ಇರಲಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ಕರಾರ ಪತ್ರವನ್ನು ನೊಂದ ಮಾಡಿಕೊಟ್ಟಿದ್ದರಿಂದ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ವಕೀಲರ ಮುಖಾಂತರ ಕಳುಹಿಸಿದ ನೋಟಿಸಿನೊಂದಿಗೆ ರೂ.50,000/- ಚೆಕ್ಕನ್ನು ನಾನು ಕಳಿಸಿರುವುದಿಲ್ಲ, ಏಕೆಂದರೆ ರೂ.50,000/- ಹಣವನ್ನು ಖರೀದಿ ಪತ್ರ ಮಾಡಿಕೊಡುವ ಕಾಲಕ್ಕೆ ಕೊಡುವ ಬಗ್ಗೆ ಮಾತುಕತೆಯಾಗಿರುತ್ತದೆ ಎಂದು ಹೇಳುತ್ತಾರೆ.

ಪ್ರತಿವಾದಿಯರು ಒಂದು ವರ್ಷದ ಅವಧಿಯಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಸರಿ ಮಾಡಿಕೊಂಡು ಖರೀದಿ ಪತ್ರ ಬರೆದುಕೊಡುವುದಾಗಿ ಒಪ್ಪಿದ್ದರು. ದಾವಾ ಹಾಕುವ ಕಾಲಕ್ಕೆ ಉಳಿದ ಪ್ರತಿಫಲದ ಹಣ ರೂ.50,000/- ಗಳನ್ನು ನ್ಯಾಯಾಲಯದಲ್ಲಿ ಭರಣಾ ಮಾಡಲು ನ್ಯಾಯಾಲಯದ ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

ಕಲ್ಲೋಳ್ಳಿ ಗ್ರಾಮದ ಬಾಳೇಶ ಯಲ್ಲಪ್ಪ ದಾಸನವರ ರವರ ಪರಿಚಯ ನನಗೆ ಇದೆ. ಆತ ನನಗೆ 10-12 ವರ್ಷಗಳಿಂದ ಪರಿಚಯ ಇರುತ್ತಾನೆ. ಆತ ನಮ್ಮೂರಿನವನು ಇದ್ದ ಕಾರಣ ನನಗೆ ಪರಿಚಯ ಇರುತ್ತಾನೆ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ